(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ. ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ 23.3.05ರ 16ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 195 ಪ್ರಶ್ನೆಗಳಿ ಪೈಕಿ 170 ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು:– ಸಭೆಯ ಮುಂದೆ ಇಡಲಾಗಿದೆ (ಅನುಬಂಧ–1)

3. ಅಧ್ಯಕ್ಷರ ಟಿಪ್ಪಣಿ ಮೇರೆಗೆ

ವಿಷಯ : ವೆನಿಲ್ಲಾ ಬೆಳೆಗಾರರ ಸಮಸ್ಯೆ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ವೆನಿಲ್ಲಾ ಬೆಳೆಗಾರರ ಬಗ್ಗೆ ಕೇಳಿದ್ದೆ, ಇದು ಬಹಳ ದೊಡ್ಡ ಸಮಸ್ಯೆ ಇದೆ.

ಅಧ್ಯಕ್ಷರು:– ಅವಕಾಶ ಕೊಡೋಣ. ವಿತ್ತೀಯ ಕಾರ್ಯಕಲಾಪ ಪ್ರಾರಂಭ ಮಾಡಬೇಕು. ಶೂನ್ಯ ವೇಳೆ ಮಧ್ಯಾಹ್ನ ತೆಗೆದುಕೊಳ್ಳೋಣ. ಒಂದು ಇದೆ ಎಂದರೆ ಬಹಳ ಜನ ಕೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮೊನ್ನೆ ಅವಕಾಶ ಕೊಡದೆ ಇದ್ದುದಕ್ಕೆ ಇವತ್ತಿಗೆ ಬಂದಿದೆ. ಮತ್ತೆ ಇವತ್ತು ತಾವು ಅವಕಾಶ ಕೊಡಲಿಲ್ಲ ಎಂದರೆ ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡಲಿಲ್ಲ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಯಾವಾಗ ಚರ್ಚೆ ಮಾಡುತ್ತೀರಿ? ಹಳ್ಳಿಗಳಿಗೆ ಹೋಗುವ ಹಾಗೆ ಇಲ್ಲ. ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ.

4. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಉಪ ಮುಖ್ಯ ಮಂತ್ರಿಗಳ ಪರವಾಗಿ: ಮಾನ್ಯ ಅಧ್ಯಕ್ಷರೆ, ಉಪ ಮುಖ್ಯ ಮಂತ್ರಿಗಳ ಪರವಾಗಿ 2004–05ನೇ ಸಾಲಿನ ಪೂರಕ ಅಂದಾಜುಗಳ 3ನೇ ಕಂತನ್ನು ಸದನದ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ವಿಷಯ : ಹುತಾತ್ಮರ ದಿನಾಚರಣೆ ಅಂಗವಾಗಿ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುವ ಬಗ್ಗೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಕೇಳುತ್ತಿಲ್ಲ, ನಿಮ್ಮ ಗಮನಕ್ಕೆ ಒಂದು ವಿಚಾರ ತರುತ್ತಿದ್ದೇನೆ. ಮಾರ್ಚ್ 23ನೇ ತಾರೀಖು ಹುತಾತ್ಮರ ದಿನಾಚರಣೆಯನ್ನು ಆಚರಿಸುತ್ತೇವೆ. ಮಾನ್ಯ ಭಗತ್‌ಸಿಂಗ್, ರಾಜ್‌ಗುರು, ಮತ್ತು ಸುಖದೇವ್ ಅವರನ್ನು ಗಲ್ಲಿಗೆ ಹಾಕುವಂತಹ ದಿನಾಚರಣೆ ಇಡೀ ದೇಶ ಶ್ರದ್ಧಾಂಜಲಿ ಸಲ್ಲಿಸುತ್ತಿದೆ. ನಾನು ತಮ್ಮಲ್ಲಿ ವಿನಂತಿಸುತ್ತೇನೆ, ಈ ಸದನದಲ್ಲಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಬೇಕು. ಇಡೀ ದೇಶ ಅವರಿಗೆ